Indian Journal of History and Archaeology

ISSN (E):2582-225X
VOL-2, ISSUE -5,JANUARY-FEBRUARY, 2021, 24-30

# "ಚಳ್ಳಕೆರೆ ಪಟ್ಟಣದ ಚರಿತ್ರೆ ಮತ್ತು ಸಂಸ್ಕೃತಿ"

ಎ.ಗೀತಾ

ಎ.ಗೀತಾ
ಸಂಶೋಧನಾ ವಿದ್ಯಾರ್ಥಿ
ಕನ್ನಡವಿಶ್ವವಿದ್ಯಾಲಯ,ಹಂಪಿ,
ಹೊಸಪೇಟೆ ತಾಲ್ಲೂಕು
ಬಳ್ಳಾರಿ ಜಿಲ್ಲೆ

ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಚಿತ್ರದುರ್ಗ ಜಿಲ್ಲೆಯ 'ಗಂಡುಮೆಟ್ಟಿನ ನಾಡು'ಎಂದು ಇತಿಹಾಸದಲ್ಲಿ ದಾಖಲಾಗಿದೆ ಪೂರ್ವಿಕರ ಪರಂಪರೆಯ ಕುರುಹು ಎಂಬಂತೆ ಏಳು ಸುತ್ತಿನಕೋಟೆ ಚಿತ್ರದುರ್ಗದ ವಿಶೇಷತೆಗಳಲ್ಲೊಂದು ಭೂ ವಿಜ್ಞಾನಿಗಳು ಜಗತ್ತಿನ ಅತ್ಯಂತ ಪುರಾತನವೆನಿಸಿದ ಭೂಮಿ ಎಂದರೆ ಕರ್ನಾಟಕ ಪೀಠಭೂಮಿ. ಈ ಪೀಠ ಭೂಮಿಯ ಅತ್ಯಂತ ಪುರಾತನ ಭೂ-ಭಾಗವೇ ಚಿತ್ರದುರ್ಗ ಜಿಲ್ಲೆ"ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಮಳೆ ಬೀಳುವ ಜಿಲ್ಲೆ ಚಿತ್ರದುರ್ಗವಾಗಿದೆ, ಈಗಿನ ಚಿತ್ರದುರ್ಗ ಜಿಲ್ಲೆಯು 1997 ಆಗಸ್ಟ್ 15ರವರೆಗೂ ದಾವಣಗೆರೆ ತಾಲ್ಲೂಕನ್ನು ಒಳಗೊಂಡಂತೆ 09 ತಾಲ್ಲೂಕುಗಳನ್ನು ಒಳಗೊಂಡಿತ್ತು, ಉತ್ತರದ ಮೌರ್ಯರು, ಕರ್ನಾಟಕದ ಕದಂಬರಾದಿಯಾಗಿ ಆನೇಕ ಅಳರಸರು ಚಿತ್ರದುರ್ಗ ಪ್ರದೇಶದಲ್ಲಿ ಆಳ್ವಕೆ ಮಾಡಿದ್ದಾರೆ ವಿಜಯನಗರದ ಕಾಲದಲ್ಲಿ ಪಾಳೆಗಾರರ ಮೂಲಕ ಆಳ್ವಕೆ ಕಂಡ ಈನಗರದ ಪಾತ್ರ ಚಾರಿತ್ರಿಕವಾಗಿ ಗಮನಾರ್ಹವಾದುದು.

ಈ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿ (1997ರವರೆಗೆ) ಚಳ್ಳಕೆರೆ, ಚಿತ್ರದುರ್ಗ, ದಾವಣಗೆರೆ, ಹರಿಹರ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಜಗಳೂರು ಮತ್ತು ಮೊಳಕಾಲ್ಮೂರು ತಾಲ್ಲೂಕುಗಳು ಜಿಲ್ಲೆಯಲ್ಲಿ 09 ತಾಲ್ಲೂಕು, 03 ಹೋಬಳಿಗಳಿದ್ದು -10,852 ಚ.ಕಿ.ಮೀ ವಿಸ್ತೀರ್ಣಹೊಂದಿತ್ತು.

ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾಗಿದೆ ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ ಅತ್ಯಂತ ಕಡಿಮೆ ಮಳೆ ಹಾಗೂ ಹೆಚ್ಚು ಉಷ್ಣಾಂಶದಿಂದ ಕೂಡಿದ ಬರಡಾದ ಭೂ-ಪ್ರದೇಶವನ್ನು ಒಳಗೊಂಡಿರುವ ಬರದ ನಾಡಾಗಿದೆ.

ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಹೀಗಿದ್ದರು ವಾಣಿಜ್ಯ ಕ್ಷೇತ್ರದಲ್ಲಿ ಜನಪ್ರಿಯತೆಗಳಿಸುವ ಮೂಲಕ ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರಾಗಿದೆ ಇಂತಹ ಹೆಸರಾಂತ ತಾಲ್ಲೂಕು ಚಳ್ಳಕೆರೆಗೆ "ಚಳ್ಳಕೆರೆ"ಎಂಬ ಹೆಸರು ಬರಲು ಹಲವಾರು ಐತಿಹ್ಯಗಳನ್ನು ನಾವು ಕಾಣಬಹುದಾಗಿದೆ.

"ಚಳ್ಳಕೆರೆ ತಾಲ್ಲೂಕು ಕ್ರಿ.ಶ.1882ರವರೆಗೆ ದೊಡ್ಡೇರಿ ತಾಲ್ಲೂಕು ಎಂದೆ ಹೆಸರಾಗಿತ್ತು ಎಂಬುದು ಇತಿಹಾಸ ದಾಖಲೆಗಳಿಂದ ದೃಢಪಟ್ಟಿದೆ.

ದೊಡ್ಡೇರಿ ಒಂದು ಬ್ರಿಟೀಷರ ಕಾಲದಿಂದಲೂ ಆಡಳಿತ ಕೇಂದ್ರ ಪ್ರದೇಶವಾಗಿತ್ತು, ಚಳ್ಳಕೆರೆಯಾಗುವುದಕ್ಕಿಂತ ಮುಂಚೆ ಆಡಳಿತ ಕ್ಷೇತ್ರವಾಗಿತ್ತು, ಹಾಗೂ ದೊಡ್ಡೇರಿ ಪಾಳೇಗಾರರ ಕಾಲದಲ್ಲಿ ಅಭಿವೃದ್ಧಿ ಹೊಂದುತ್ತದೆ. ದೊಡ್ಡೇರಿಯಲ್ಲಿ ದೊಡ್ಡಮದಕರಿನಾಯಕ ನೆಲೆಸಿದ ಎಂಬ ಐತಿಹ್ಯದ ಕುರುಹುಗಳನ್ನು ಕಾಣುತ್ತೇವೆ. ಹಾಗೂ ದೊಡ್ಡೇರಿ ಕದನವು ಬಿಚ್ಚುಗತಿ ಭರಮಣ್ಣ ನಾಯಕನ ಆಡಳಿತ ಕಾಲದಲ್ಲಿ ನೆಡೆದಿರುವುದು ಕಾಣುತ್ತೇವೆ. ಪ್ರಸ್ತುತ ಕನ್ನೇಶ್ವರಸ್ವಾಮಿ ಮಠವನ್ನು ನೋಡಬಹುದಾಗಿದೆ. ಅಲ್ಲಿ ಸಿಗುವಂತಹ ಸ್ಮಾರಕಗಳು ಎಲ್ಲವೂ ಪಾಳೆಗಾರರ ಆಡಳಿತ ಕಾಲದ್ದಾಗಿದೆ ಎಂದು ಚರಿತ್ರೆಯ ಅಧ್ಯಯನದಿಂದ ತಿಳಿದು ಬರುತ್ತದೆ.

ಅದೇ ರೀತಿ ಮತ್ತೊಂದು ಚಳ್ಳಕೆರೆಗೆ ಹೊಂದಿಕೊಂಡಂತೆ ಇರುವ ಕಾಟಪ್ಪನಹಟ್ಟಿ ಚರಿತ್ರೆಯನ್ನು ತಿಳಿಯಬಹುದಾಗಿದೆ, ಇದರ ಚರಿತ್ರೆ ದೊಡ್ಡಮದಕರಿನಾಯಕನ ಮಗ ಐದನೇ ಮದಕರಿ ನಾಯಕ ಇವನು ಕೊನೆಯರಾಜ, ಹಾಗೂ ಪಟ್ಟಾಭಿಷೇಕ ಆಗದೆ ಇರುವ ರಾಜ ಎಂದರೆ ದೊಡ್ಡ ಮದಕರಿನಾಯಕ, ಹಾಗೂ ಮಲ ಸಹೋದರನಿಗೆ ಇಬ್ಬರೂ ಹೆಂಡತಿಯರು ಭೀಮವ್ವನಾಗತಿ (ಮಳಲೆರ ಹೆಣ್ಮುಗಳು), ಇನ್ನೊಬ್ಬಳು ಪಾರ್ವತಿನಾಯರ್ ಕೇರಳದವಳು ಪಾರ್ವತಿನಾಯರ್‌ಗೆ ಇಬ್ಬರು ಮಕ್ಕಳಿರುತ್ತಾರೆ. ಒಬ್ಬ ಜಂಪಣ್ಣ ನಾಯಕ ಬೆಂಗಳೂರಿನಲ್ಲಿ ಬ್ರಿಟೀಷರ ಕಾಲದಲ್ಲಿ ದಂಡನಾಯಕನಾಗಿ ಸೇವೆ ಸಲ್ಲಿಸುತ್ತಾನೆ, ಇನ್ನೊಬ್ಬ ಕಾಟಪ್ಪ ಎಂದು, ಆ ಕಾಟಪ್ಪನೇ ಕಾಟಪ್ಪನಹಟ್ಟಿಯಲ್ಲಿ ನೆಲೆಸುತ್ತಾನೆ ಅಲ್ಲಿ ಕಾಟಮಲಿಂಗೇಶ್ವರ ದೇವಾಲಯವನ್ನು ಸ್ಥಾಪನೆ ಮಾಡುತ್ತಾನೆ. ಕಾಟಮಲಿಂಗೇಶ್ವರ ಕಾಮಗೇತಿಗಳ ಕುಲದೈವ ಈಗಲೂ ಕಾಟಪ್ಪನಹಟ್ಟಿಕೋಟೆ ದೇವಾಲಯಗಳನ್ನು ಕಾಣಬಹುದಾಗಿದೆ ಎಂಬುದು ಮೌಖಿಕ ಚರಿತ್ರೆಯಲ್ಲಿ ತಿಳಿಯಬಹುದು.

ಈಗ ಚಳ್ಳಕೆರೆ ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವ ಸ್ಥಳವಾಗಿದೆ ಅಲ್ಲದೇ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಚಳ್ಳಕೆರೆ ದೈವಗಳಾದ ಶ್ರೀವೀರಭದ್ರಸ್ವಾಮಿ ದೇವಾಲಯ, ಹಾಗೂ ಚಳ್ಳಕೇರಮ್ಮ

ದೇವಾಲಯಗಳು ಪ್ರಮುಖವಾಗಿವೆ. ಈ ಪ್ರದೇಶದಲ್ಲಿ ಹೆಚ್ಚಾಗಿ ನಾಯಕ ಜನಾಂಗವೇ ಇರುವುದರಿಂದ ಬೇಡರ ನಾಯಕರ ಸಾಂಸ್ಕೃತಿಕ ಆಚರಣೆ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಈ ಎರಡು ಜಾತ್ರೆಗಳು ನಗರದಲ್ಲಿ ಆಚರಣೆ ಮಾಡುವ ಮಹಾ ಜಾತ್ರೆಗಳಾಗಿವೆ. ವೀರಭದ್ರಸ್ವಾಮಿಯ ಜಾತ್ರೆಯು ಸತತ ಒಂದು ವಾರದವರೆಗೆ ಆಚರಣೆ ಮಾಡುತ್ತಾರೆ ಅದೇ ರೀತಿ ಗ್ರಾಮದೇವತೆಯಾದ ಚಳ್ಳಕೇರಮ್ಮನ ಜಾತ್ರೆಯನ್ನು ವಿಶಿಷ್ಟ ಹಾಗೂ ವಿಜೃಂಭಣೆಯಿಂದ ಆಚರಿಸುತ್ತಾರೆ.

ಚಳ್ಳಕೆರೆಯನ್ನು ಒರೆಗಲ್ಲುಪಟ್ಟಣ ಎಂದು ಕರೆಯುತ್ತಿದ್ದರು"ಮೊದಲು ಗ್ರಾಮದೇವತೆ ಓರಗೆಲ್ಲಮ್ಮನ ಹೆಸರಿನಿಂದ ಓರಗಲ್ಲು ಎಂದು ಕರೆಯುತ್ತಿದ್ದರಂತೆ. ಕ್ರಮೇಣ ಚಳ್ಳಕೇರಮ್ಮನ ಗ್ರಾಮದೇವತೆಯ ಹೆಸರಿನಿಂದ ಚಲುವಕೆರೆ, ಚಳ್ಳಕೇರಿ, ಚಳ್ಳಕೆರೆ ಎಂಬ ಐತಿಹ್ಯವಿದೆ." ಚರಿತ್ರೆಯಲ್ಲಿ ಮೌಖಿಕವಾಗಿ ಹೇಳಬಹುದಾದರೆ ಚಳ್ಳಕೆರಮ್ಮ ಎಂದು ಹೇಗಾದಳು ಎಂದರೆ ಚಳ್ಳಕೆರಮ್ಮ ಒಬ್ಬ ಗ್ರಾಮದ ಉನ್ನತ ವರ್ಗ ಅಥವಾ ಬ್ರಾಹ್ಮಣ ವರ್ಗದ ಹೆಣ್ಣಾಗಿದ್ದಳು.ಆಕೆಯನ್ನು ಒಬ್ಬ ದಲಿತ ವ್ಯಕ್ತಿ ಮದುವೆಯಾಗುತ್ತಾನೆ ನಂತರ ಮಕ್ಕಳಾಗುತ್ತವೆ. ಮಕ್ಕಳು ಹೋಳಗೆಯನ್ನು ತಿನ್ನದೆ ಮೂಳೆ ತಿನ್ನುತ್ತಿರುತ್ತಾರೆ. ಹಾಗೂ ಅವಳಿಗೆ ಅನುಮಾನ ಬಂದು ನೀನು ಯಾವ ಜಾತಿಗೆ ಸೇರಿದವನು ಎಂದು ಕೇಳಿದಾಗ ಅವನು ದಲಿತ ವರ್ಗಕ್ಕೆ ಸೇರಿದವನು ಎಂದು ಹೇಳುತ್ತಾನೆ. ಹಾಗೂ ಮಕ್ಕಳನ್ನು ಹಾಗೂ ಗಂಡನನ್ನುಕೊಂದು ಆಕೆಯೂ ಸಾವನ್ನಪ್ಪುತ್ತಾಳೆ. ಆಕೆಯನ್ನು ದೇವತೆಯಾಗಿ ಆರಾಧನೆ ಮಾಡುತ್ತಾರೆ.ಚಳ್ಳಕೆರಮ್ಮ ಶಕ್ತಿ ದೇವತೆಯಾದರೆ ವರ್ಷಕ್ಕೊಮ್ಮೆ ಜಾತ್ರೆ ನಡೆದಾಗ ಮಹಿಷೆಯನ್ನು ಕೊಲ್ಲುತ್ತೇವೆ. ಕೊಲ್ಲಲ್ಪಡುವ ಕೋಣ ಅಂದರೆ ಮಹಿಷನೇ ಆಕೆಯ ಪತಿಯಾಗಿರುತ್ತಾನೆ. ಈ ರೀತಿಯಾದ ಮೌಖಿಕಚರಿತ್ರೆಯನ್ನು ಹೊಂದಿದೆ.

ಕರ್ನಾಟಕದ ಜಿಲ್ಲಾ ಕೇಂದ್ರಗಳಲ್ಲಿ ಚಿತ್ರದುರ್ಗವು ಒಂದಾಗಿದ್ದು, ಈ ಜಿಲ್ಲೆಯಲ್ಲಿ ಒಟ್ಟು 06 ತಾಲ್ಲೂಕುಗಳಿವೆ. ಆರು ತಾಲ್ಲೂಕುಗಳೆಂದರೆ, ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗಗಳಾಗಿವೆ. ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಒಂದಾಗಿದೆ. ಚಳ್ಳೆಕರೆ ನಗರವು ಈ ತಾಲ್ಲೂಕಿನ ಆಡಳಿತ ಕೇಂದ್ರವಾಗಿದೆ. ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ಅತಿ ಕಡಿಮೆ ಮಳೆ ಹಾಗೂ ಹೆಚ್ಚು ಉಷ್ಣಾಂಶದಿಂದ ಕೂಡಿದ ಬರಡಾದ ಭೂ–ಪ್ರದೇಶವನ್ನು ಒಳಗೊಂಡಿರುವ ಬರದ ನಾಡಾಗಿದೆ.ಈಗಿದ್ದರೂ ವಾಣಿಜ್ಯ ಕ್ಷೇತ್ರದಲ್ಲಿ ಜನಪ್ರಿಯತೆಗಳಿಸುವ ಮೂಲಕ ರಾಜ್ಯರಾಷ್ಟ್ರ ಮಟ್ಟದಲ್ಲಿ ಹೆಸರಾಗಿದೆ.

**ಪ್ರಾದೇಶಿಕ ಲಕ್ಷಣಗಳು** : ಚಳ್ಳಕೆರೆಯು ತಾಲ್ಲೂಕಿನ ಪ್ರಮುಖ ನಗರ ಮತ್ತು ತಾಲ್ಲೂಕು ಕೇಂದ್ರವಾಗಿದ್ದು ತನ್ನ ನೆರೆಹೊರೆಗಳಾಗಿ ಉತ್ತರದಲ್ಲಿ ಮೊಳಕಾಲ್ಮೂರು, ಬಳ್ಳಾರಿಗಳನ್ನು ದಕ್ಷಿಣದಲ್ಲಿ ಹಿರಿಯೂರು ಪಶ್ಚಿಮಕ್ಕೆ ಜಗಳೂರು, ಚಿತ್ರದುರ್ಗಗಳನ್ನು ಪೂರ್ವದಲ್ಲಿ ಆಂಧ್ರ ಪಾವಗಡ ಪ್ರದೇಶಗಳನ್ನು ಒಳಗೊಂಡಿದೆ. ಚಳ್ಳಕೆರೆ

ತಾಲ್ಲೂಕು ಸಣ್ಣ ಸಣ್ಣ ಬೆಟ್ಟ ಗುಡ್ಡಗಳಿಂದ ಸುತ್ತುವರೆದಿದ್ದು ಯಾವುದೇ ದೊಡ್ಡದಾದ ವಿಶೇಷ ಬೆಟ್ಟಗಳು ಈ ತಾಲ್ಲೂಕಿನಲ್ಲಿ ಕಂಡುಬರುವುದಿಲ್ಲ, ಇಡಿ ತಾಲ್ಲೂಕಿನ ಭೂಪ್ರದೇಶವು ಸಮತಟ್ಟಾಗಿರದೆ ತಗ್ಗು ದಿಣ್ಣೆಗಳಿಂದ ಕೂಡಿದ ವಿಶಾಲವಾದ ಬರಡು ಮೈದಾನವನ್ನೊಳಗೊಂಡಿದೆ, ಬಹುತೇಕ ಕಲ್ಲು ಮಿಶ್ರಿತ ಕೆಂಪುಮಣ್ಣಿನಿಂದ ಈ ತಾಲ್ಲೂಕಿನ ಭೂಭಾಗದಿಂದ ಕೂಡಿದ್ದರೂ ಕೆಲವು ಪ್ರದೇಶಗಳು ಅಲ್ಲಲ್ಲಿ ಕೆಂಪುಮಣ್ಣು ಕಂಡು ಬರುತ್ತದೆ. ಇಲ್ಲಿನ ಭೂಮಿ ವ್ಯವಸಾಯಕ್ಕೆ ಅಷ್ಟೇನು ಫಲಪ್ರದವಾಗಿಲ್ಲವಾದರೂ ವ್ಯವಸಾಯ ಈ ಜನರ ಮುಖ್ಯ ಕಸುಬಾಗಿದೆ, ವಾರ್ಷಿಕವಾಗಿ ಚಳ್ಳಕೆರೆ ತಾಲ್ಲೂಕಿನಲ್ಲಿ ಸರಾಸರಿ 404.54ಮಿ.ಮೀ. ಮಳೆಯಾಗುತ್ತಿದ್ದು, ಚಿತ್ರದುರ್ಗ ಜಿಲ್ಲೆಯಲ್ಲಿಯೇ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ.

ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಸಮೀಪದ ಕುದಾಪುರಗ್ರಾಮದ ಹತ್ತಿರ ವಿಜ್ಞಾನ ಸಂಶೋಧನಾ ಸಂಸ್ಥೆಗಳು ಆರಂಭವಾಗಿವೆ. ಸುಮಾರು 10.500ಎಕರೆ ಪ್ರದೇಶದಲ್ಲಿ ದೇಶದ ಪ್ರತಿಷ್ಠಿತ ವಿಜ್ಞಾನ ಸಂಶೋಧನಾ ಸಂಸ್ಥೆಗಳಾದ ಭಾರತೀಯ ವಿಜ್ಞಾನ ಸಂಶೋಧನಾ ಸಂಸ್ಥೆ(ಐ.ಐ.ಎಸ್ಸಿ) ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ(ಡಿ.ಆರ್.ಡಿ.ಓ) ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ( ಇಸ್ರೋ) ಬಾಬಾ ಅನುಸಂಶೋಧನಾ ಕೇಂದ್ರ (ಬಿ.ಎ.ಆರ್.ಸಿ)ಕಾರ್ಯನಿರ್ವಹಿಸುತ್ತಿವೆ.

**ವಿಸ್ತೀರ್ಣ** :ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಚಳ್ಳಕೆರೆ ಬಂದು 1,94,380ಹೆಕ್ಟೇರ್ ಭೂ ಪ್ರದೇಶ ಮತ್ತು 6.987 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಒಳಗೊಂಡಂತೆ ಈ ತಾಲ್ಲೂಕಿನ ಒಟ್ಟು ವಿಸ್ತೀರ್ಣ 2100ಚ.ಕೀ.ಗಳಷ್ಟಿದೆ, ತಾಲ್ಲೂಕಿನ ಕೇಂದ್ರಸ್ಥಾನವಾದ ಚಳ್ಳಕೆರೆಯು ಕಸಬಾ, ಪರಶುರಾಂಪುರ, ತಳಕು, ನಾಯಕನಹಟ್ಟಿ ಎಂಬ ನಾಲ್ಕು ಹೋಬಳಿಗಳನ್ನು ಒಳಗೊಂಡಿದೆ, ಬಹುತೇಕ ಗ್ರಾಮಗಳಿಂದ ಕೂಡಿರುವ ಈ ತಾಲ್ಲೂಕಿನ ಕಸಬ 47, ನಾಯಕನಹಟ್ಟಿ 46, ಪರಶುರಾಂಪುರ 51, ತಳಕು ಹೋಬಳಿಗಳಲ್ಲಿ 46ಗ್ರಾಮಗಳನ್ನೊಗೊಂಡಂತೆ ಒಟ್ಟು 190ಗ್ರಾಮಗಳಿವೆ. ಅಲ್ಲದೆ ಈ ತಾಲ್ಲೂಕು 30ತಾಲ್ಲೂಕು ಪಂಚಾಯಿತಿಗಳನ್ನು ಮತ್ತು 08ಜಿಲ್ಲಾ ಪಂಚಾಯಿತಿಗಳನ್ನು ಒಳಗೊಂಡಿದೆ.

**ಜನಸಂಖ್ಯೆಯ ಲಕ್ಷಣಗಳು** : ಚಳ್ಳಕೆರೆ ತಾಲ್ಲೂಕಿನ ಎಲ್ಲಾ ಜನವರ್ಗದವರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಆಂಧ್ರಪ್ರದೇಶದ ಗಡಿಭಾಗದಲ್ಲಿರುವ ಜನರು ತೆಲುಗು ಭಾಷೆಯನ್ನು ಹಾಗೂ ತೆಲುಗು ಮಿಶ್ರಿತ ಕನ್ನಡ ಭಾಷೆಯನ್ನು ಮಾತನಾಡುವರು ಚಳ್ಳಕೆರೆ ತಾಲ್ಲೂಕು ಕೇಂದ್ರದಲ್ಲಿ 50ಸಾವಿರಕ್ಕಿಂತ ಅಧಿಕಜನರು ವಾಸವಾಗಿದ್ದು, ಉಳಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಚದುರಿದಂತೆ ಜನರು ವಾಸವಾಗಿದ್ದು, ಇವರ ಸಂಖ್ಯೆ:3.5ಲಕ್ಷದಷ್ಟಿದೆ. ಅಂದರೆ ಚಳ್ಳಕೆರೆ ತಾಲ್ಲೂಕಿನಲ್ಲಿ 4ಲಕ್ಷಕ್ಕಿಂತ ಅಧಿಕಜನರು ವಾಸವಾಗಿದ್ದಾರೆಂದು ಅಂದಾಜಿಸಲಾಗಿದೆ. 2011ರ ಜನಗಣತಿ ಪ್ರಕಾರ ಚಳ್ಳಕೆರೆ ತಾಲ್ಲೂಕಿನ ಒಟ್ಟು ಜನಸಂಖ್ಯೆ3,66,267ರಷ್ಟಿದ್ದು ಇವರು 26,032 ಕುಟುಂಬಗಳಲ್ಲಿ ವಾಸಿಸುತ್ತಿದ್ದಾರೆ. ಇದರಲ್ಲಿ ಪುರುಷರು

27,588ರಷ್ಟು ಮತ್ತು ಮಹಿಳೆಯರು 27.606ರಷ್ಟಿದ್ದಾರೆ. ಚಳ್ಳಕೆರೆ ತಾಲ್ಲೂಕಿನ ಸಾಕ್ಷರತೆ ಪ್ರಮಾಣ ಶೇ.78.7ರಷ್ಟಿದ್ದು ಇದರಲ್ಲಿ ಪುರುಷರ ಸಾಕ್ಷರತೆ 60.9ರಷ್ಟಿದೆ.

**ಮುಖ್ಯಬೆಳೆ** : ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆಯ ಬರದನಾಡು, ಕರ್ನಾಟಕ ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಪ್ರತಿಬಾರಿಯೂತನ್ನ ಪ್ರತಿನಿದಿತ್ವವನ್ನು ಹೊಂದುವ ಮೂಲಕ ಇಲ್ಲಿನ ನೆಲ, ಜಲ ಮತ್ತು ಭೂ ಆಯಾಮವನ್ನು ಸೂಚಿಸುತ್ತದೆ. ಕಲ್ಲುಗಂಟ್ಟೆಗಳಂದ ಅವೃತವಾಗಿವ ಚಳ್ಳಕೆರೆ ತಾಲ್ಲೂಕಿನ ಜನರ ಕೃಷಿಯನ್ನೇ ಮುಖ್ಯ ಕಸುಬನ್ನಾಗಿ ಹೊಂದಿದ್ದು ಇದನ್ನೇ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ.ಕರ್ನಾಟಕದಲ್ಲಿಯೇಅತ್ಯಂತಕಡಿಮೆ ಮಳೆ ಬೀಳುವ ತಾಲ್ಲೂಕು ಇದಾಗಿದ್ದು ಇಲ್ಲಿ ಸರಾಸರಿ ವಾರ್ಷಿಕವಾಗಿ 404.54ಮೀ.ಮೀ.ಮಳೆಯಾಗುತ್ತದೆ. ಮಳೆಯಾಧಾರಿತ ಬೇಸಾಯ ಪದ್ಧತಿತಾಲ್ಲೂಕಿನಾದ್ಯಂತ ಹೆಚ್ಚಾಗಿ ಕಂಡುಬರುತ್ತದೆ. ಖುಷ್ಕಿ ಬೆಳೆಗಳೇ ಇಲ್ಲಿ ಪ್ರಧಾನವಾಗಿದ್ದು ಶೇಂಗಾ, ಸೂರ್ಯಕಾಂತಿ, ಮತ್ತಿತರ ಎಣ್ಣೆಬೀಜಗಳನ್ನು ಇಲ್ಲಿ ಪ್ರಧಾನವಾಗಿ ಬೆಳೆಯಲಾಗುತ್ತಿದ್ದು ಇವುಗಳನ್ನು ಆಶ್ರಯಯಿಸಿ ಎಣ್ಣೆ ಗಿರಣಿಗಳು ಸ್ಥಾಪನೆಯಾಗಿವೆ. ಇವುಗಳಲ್ಲದೆ ರಾಗಿ, ಭತ್ತ, ಜೋಳ, ಮೆಕ್ಕೆಜೋಳಗಳನ್ನು ಆಹಾರ ಬೆಳೆಗಳಾಗಿ ಈರುಳ್ಳಿ, ಹತ್ತಿಯನ್ನು ವಾಣಿಜ್ಯ ಬೆಳೆಗಳಾಗಿ ಅಡಿಕೆ, ತೆಂಗು, ದಾಳಿಂಬೆ, ಪಪ್ಪಾಯಿಯನ್ನು ವಾಣಿಜ್ಯ ಬೆಳೆಗಳಾಗಿ ತೊಗರಿ ಮತ್ತು ಹುರುಳಿಯನ್ನು ಉಪ ಬೆಳೆಗಳಾಗಿ ಬೆಳೆಯಲಾಗುತ್ತಿದೆ.

ಚಳ್ಳಕೆರೆ ತಾಲ್ಲೂಕಿನಲ್ಲಿರುವ ಏಕೈಕ ನದಿಯ ಮೂಲ ವೇದಾವತಿ ನದಿಯಾಗಿದೆ, 'ವೇದಾ' ಮತ್ತು 'ಅವತಿ' ಎರಡು ಸೇರಿ ವೇದಾವತಿಯಾಗಿದೆ. ಈ 'ವೇದಾ' ಬಾಬಾಬುಡೇನ್ ಬೆಟ್ಟದ ಪೂರ್ವಭಾಗದಲ್ಲಿ ಹುಟ್ಟಿದರೆ 'ಅವತಿ' ಮುಳ್ಳಯ್ಯನಗಿರಿಯಲ್ಲಿ ಹುಟ್ಟಿ ಈ ಎರಡು ನದಿಗಳು ಚಿಕ್ಕಮಗಳೂರು ಜಿಲ್ಲೆಯ ಕಡೂರು ಬಳಿ ಇರುವ ತುಂಗನಹಳ್ಳಿ ಹತ್ತಿರ ಸಂಗಮಗೊಂಡು ವೇದಾವತಿಯಾಗಿ ಮುಂದುರೆಯುತ್ತಿದೆ.ಮುಂದೆ ಹೊಸದುರ್ಗ, ಹಿರಿಯೂರು ಚಳ್ಳಕೆರೆ ಮೂಲಕ ಆಂಧ್ರದ ಬೋರನತಿಪ್ಪಡ್ಯಾಂ ನಲ್ಲಿ ಶೇಕರವಾಗುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾವತಿ ನದಿಯು ಸುಮಾರು 2088ಕಿ.ಮೀ.ಉದ್ದ ಹರಿಯುವುದು.ಈ ನದಿಗೆ ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಬಳಿ ಜಲಾಶಯ ನಿರ್ಮಿಸಲಾಗಿದೆ. ಸದ್ಯ ಹಿರಿಯೂರು, ಚಿತ್ರದುರ್ಗಕ್ಕೆ ಕುಡಿಯುವ ನೀರು ಒದಗಿಸುತ್ತಿದೆ, ಚಿಕ್ಕಹಗರಿಹಳ್ಳಿ, ಹೊಳಲ್ಕೆರೆ, ಚಿತ್ರದುರ್ಗ, ಜಗಳೂರು, ಚಳ್ಳಕೆರೆ ಪ್ರದೇಶಗಳಲ್ಲಿ ಹರಿಯುತ್ತದೆ.ಗರಣಿ ಹಳ್ಳ ಚಿತ್ರದುರ್ಗ ತಾಲ್ಲೂಕಿನಲ್ಲಿ ಹುಟ್ಟಿ ಚಳ್ಳಕೆರೆಯ ರಾಣಿಕೆರೆಯ ಮೂಲಕ ಹರಿದು ನಾಗಗೊಂಡನಹಳ್ಳಿ, ಜಾಜೂರು ಸಮೀಪ ವೇದಾವತಿ ನದಿ ಸೇರುತ್ತದೆ. ನಾಯಕನಹಟ್ಟಿತೊರೆ ಚಳ್ಳಕೆರೆ ತಾಲ್ಲೂಕಿನಲ್ಲಿ ಹದಿರು ವೇದಾವತಿಗೆ ಸೇರುತ್ತದೆ.ಚಳ್ಳಕೆರೆ ತಾಲ್ಲೂಕಿನಲ್ಲಿ ವೇದಾವತಿ ನದಿ ಹರಿಯುವ ಇಕ್ಕೆಲಗಳಲ್ಲಿ ನೀರಾವರಿ ಆಧಾರಿತ ಬೇಸಾಯ ಜಾರಿಯಲ್ಲಿದ್ದು, ಚಳ್ಳಕೆರೆ

ತಾಲ್ಲೂಕಿನಲ್ಲಿರುವ 70ಕ್ಕು ಹೆಚ್ಚು ಕೆರೆಗಳು ಪ್ರಸ್ತುತ ಬತ್ತಿಹೋಗಿರುವುದರಿಂದ ಉಳಿದಂತೆ ತಾಲ್ಲೂಕಿನಾದ್ಯಂತ ಮಳೆಯಾಧಾರಿತ ಬೇಸಾಯ ಪದ್ಧತಿ ಬಳಕೆಯಲ್ಲಿದೆ.

ಈ ತಾಲ್ಲೂಕಿನಲ್ಲಿ ಕೆಂಪುಮಣ್ಣು, ಕಪ್ಪು ಮಣ್ಣು ಹಾಗೂ ಕೆಂಪು ಮಿಶ್ರಿತ ಕಪ್ಪು ಮಣ್ಣು ಭೂಮಿಯನ್ನು ಫಲವತ್ತಾಗಿಸಿವೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಬೆಳೆಯುವ 'ಈ ಭಾಗದ ಈರುಳ್ಳಿಗೆ ರಾಜ್ಯ ಮತು ಕಲ್ಕತ್ತಾದಲ್ಲಿ ವಿಶೇಷ ಮನ್ನಣೆ ಇದೆ' ಚಳ್ಳಕೆರೆ ತಾಲ್ಲೂಕಿನ ಒಟ್ಟಾರೆ ಭೂ ಪ್ರದೇಶದಲ್ಲಿ ಸುಮಾರು 2,32,979 ಎಕರೆಗಳಷ್ಟು ಭೂ ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಾಗಿದೆ. ಕೃಷಿ ಭೂಮಿಯನ್ನು ಹೊರೆತುಪಡಿಸಿ ಈ ತಾಲ್ಲೂಕಿನಲ್ಲಿ 7,243ಎಕರೆಗಳಗೂ ಹೆಚ್ಚು ಕಾಡುಪ್ರದೇಶವಿದೆ.ಅಲ್ಲದೆ ಉಳ್ಳಾರ್ತಿ ಕಾವಲಿನಲಿ ಅಮೃತಮಹಲ್ ಹುಲ್ಲುಗಾವಲಿದ್ದು ಪ್ರಸ್ತುತ ಈ ಕಾವಲಿನಲ್ಲಿ ನಡೆಯುತ್ತಿರುವ ಕಾಮಗಾರಿಗಳಿಂದಾಗಿ ವಿಶ್ವದದೃಷ್ಟಿಯನ್ನು ತನ್ನತ್ತ ಸೆಳೆದಿದೆ.

ಚಳ್ಳಕೆರೆ ತಾಲ್ಲೂಕು ಕೃಷಿಯಷ್ಟೇಅಲ್ಲದೆ ಕೈಗಾರಿಕೆಗಳ ದೃಷ್ಟಿಯಿಂದಲೂತನ್ನ ಅಸ್ತಿತ್ವನ್ನು ಉಳಿಸಿಕೊಂಡು ಬಂದಿದೆ, ಕೃಷಿ ಆಧಾರಿತ ಬೆಳೆಗಳಾಗಿ "ಶೇಂಗಾ, ಸೂರ್ಯಕಾಂತಿ, ಹತ್ತಿ, ತೆಂಗು, ಅಡಿಕೆ, ದಾಳಂಬೆ, ಸಪೋಟ, ಜೋಳ, ರಾಗಿ, ಭತ್ತ, ಈರುಳ್ಳಿ ಮತ್ತು ದ್ವಿದಳ ಧಾನ್ಯಗಳನ್ನು ಪ್ರಮುಖ ಬೆಳೆಗಳಾಗಿ ಬೆಳೆಯಲಾಗುತ್ತದೆ.ಎಣ್ಣೆ ಬೀಜಗಳನ್ನು ಹೆಚ್ಚು ಬೆಳೆಯುತ್ತಿರುವುದರಿಂದ ಎಣ್ಣೆ ಕೈಗಾರಿಕೆಗಳಿವೆ.

ಚಿತ್ರದುರ್ಗ ಜಿಲ್ಲೆಯಾದ್ಯಂತ 14 ಮಧ್ಯಮ ಮತ್ತು ಬಾರೀ ಕೈಗಾರಿಕೆಗಳಿದ್ದು, ಸುಮಾರು 600ಕ್ಕೂ ಹೆಚ್ಚು ಸಣ್ಣ(ಗುಡಿಕೈಗಾರಿಕೆಗಳು)ಕೈಗಾರಿಕೆಗಳಿವೆ. ಚಳ್ಳಕೆರೆಯು ಕೈಗಾರಿಕೆಯ ವಿವಿಧ ವಸ್ತುಗಳು ಮತ್ತು ಎಣ್ಣೆ ಉತ್ಪಾದನೆಯ ಕೈಗಾರಿಕೆಗಳ ದೃಷ್ಟಿಯಿಂದ ರಾಜ್ಯವಷ್ಟೆ ಅಲ್ಲದೆ ರಾಷ್ಟ್ರ ವ್ಯಾಪ್ತಿಯಾಗಿ 'ಎರಡನೆ ಬಾಂಬೆ' ಎಂದು ಹೆಸರಾಗಿದೆ.

**ಹವಾಗುಣ** :ಚಿತ್ರದುರ್ಗ ಜಿಲ್ಲೆಯ ಅತಿ ಹಿಂದುಳಿದ ತಾಲ್ಲೂಕು ಎನಿಸಿಕೊಂಡಿರುವ ಚಳ್ಳಕೆರೆ ತಾಲ್ಲೂಕಿನ ಹವಾಗುಣ ತಾಲ್ಲೂಕಿನ ಅಭಿವೃದ್ಧಿಗೆ ಅಷ್ಟೇನು ಲಾಭದಾಯಕವಾಗಿಲ್ಲ. "ಈ ಜಿಲ್ಲೆಯ ಹವಾಗುಣವು ಬೇಸಿಗೆಯಲ್ಲಿ ಹೆಚ್ಚು ಉಷ್ಣದಿಂದ ಕೂಡಿರುತ್ತದೆ. ಏಪ್ರಿಲ್ ತಿಂಗಳು ಅತಿ ಹೆಚ್ಚು ಉಷ್ಣತೆಯ ತಿಂಗಳಾಗಿದೆ.ಈ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗದ ಸ್ವಲ್ಪ ಭಾಗದತಾಪಮಾನ 41ಸೆ, ನಿಂದ 42ಸೆ.ಗೆ ಏರುತ್ತದೆ.ಈ ಜಿಲ್ಲೆಯಲ್ಲಿ ನವೆಂಬರ್ ಮತ್ತು ಡಿಸೆಂಬರ್ ತಿಂಗಳು ತಂಪು ಮತ್ತು ಚಳಿಯಿಂದ ಕೂಡಿರುತ್ತದೆ. ತಾಪಮಾನ 14ಸೆ.ಒಳಗೆ ಹೊರಗೆ ಇರುತ್ತದೆ".

**ಕ್ಷೇತ್ರದ ಇತಿಹಾಸ** :ಎಣ್ಣೆ ಉತ್ಪಾದನೆಯ ದೃಷ್ಟಿಯಿಂದ ಎರಡನೆ ಬಾಂಬೆ ಎಂದು ಕರೆಯಿಸಿಕೊಳ್ಳುವ ಚಳ್ಳಕೆರೆ ತಾಲ್ಲೂಕಿಗೆ ಪ್ರಾಚೀನ ಇತಿಹಾಸವಿದೆ. "ಚಿತ್ರದುರ್ಗಜಿಲ್ಲೆಯ ಶಾಸನಗಳಿಂದ ಚಳ್ಳಕೆರೆ ತಾಲ್ಲೂಕು ಮೌರ್ಯರು, ಶಾತವಾಹನರು, ಕದಂಬರು, ಸೇವುಣರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು,

ಹೊಯ್ಸಳರು, ವಿಜಯನಗರಅರಸರು, ಚಿತ್ರದುರ್ಗ ಪಾಳೆಯಗಾರರು, ಹಟ್ಟಿಯ ಪಾಳೆಗಾರರ" ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ತಿಳಿದುಬರುತ್ತದೆ. ಇವರ ಆಳ್ವಿಕೆಗೆ ಸಂಬಂಧಿಸಿದ ಸುಮಾರು 60ಕ್ಕೂ ಹೆಚ್ಚು ಶಾಸನಗಳು ಚಳ್ಳಕೆರೆ ತಾಲ್ಲೂಕಿನಲ್ಲಿ ಲಭ್ಯವಾಗಿವೆ. ಚಳ್ಳಕೆರೆಯ 5ನೇ ಶಾಸನದಲ್ಲಿ ಈ ತಾಲ್ಲೂಕು ಕ್ರಿ.ಶ.974ರಲ್ಲಿ ನೊಳಂಬರ ಆಳ್ವಿಕೆಗೆ ಒಳಪಟ್ಟಿದ್ದ ವಿಚಾರವನ್ನು ವಿದ್ವಾಂಸರು ಸಂಶೋಧಿಸಿದ್ದಾರೆ. ಅಲ್ಲದೆ ಈ ತಾಲ್ಲೂಕು ಕ್ರಿ.ಶ.14–16ನೇ ಶತಮಾನದವರೆಗೆ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತು ಎಂಬ ವಿಷಯ ಚಳ್ಳಕೆರೆಯ 33–34ನೇ ಶಾಸನಗಳಿಂದ ತಿಳಿದುಬರುತ್ತದೆ. ಚಳ್ಳಕೆರೆ ತಾಲ್ಲೂಕಿನ ಶಾಸನಗಳೆಲ್ಲವು ಇ.ಸಿ. ಸಂಪುಟ :02, ಎಂ.ಎ.ಆರ್.11 ಮತ್ತು ವಿವಿಧ ಸಂಶೋಧನಾ ಗ್ರಂಥಗಳಲ್ಲಿ, ಬಿಡಿ ಬಿಡಿ ಲೇಖನಗಳಲ್ಲಿ ಪ್ರಕಟಗೊಂಡಿವೆ." ಕಾಲಾಂತರದಲ್ಲಿ ಚಳ್ಳಕೆರೆಯು ಹೈದರ್,ಟಿಪ್ಪು, ಮೈಸೂರು ಒಡೆಯರು, ಬ್ರಿಟೀಷರ ಆಳ್ವಿಕೆಗೆ ಒಳಪಟ್ಟು ಪ್ರಸ್ತುತ ಕರ್ನಾಟಕದ ತಾಲ್ಲೂಕು ಕೇಂದ್ರವಾಗಿ ಹೆಸರಾಗಿದೆ.

ಈ ರೀತಿಯಾಗಿ ಚಳ್ಳಕೆರೆ ಪಟ್ಟಣದ ಚರಿತ್ರೆ ಮತ್ತು ಸಂಸ್ಕ್ರತಿಯು ಅತ್ಯಂತ ಪುರಾತನವಾದುದು ಮತ್ತು ಇಲ್ಲಿಯ ಸಂಸ್ಕೃತಿ, ಆಚರಣೆಗಳ ವಿಶಿಷ್ಟತೆಯನ್ನು ಹೊಂದಿದೆ ಹಾಗು ನಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ ಎಂದು ಹೇಳಬಹುದಾಗಿದೆ.

**ಆಕರ ಗ್ರಂಥಗಳು:**

1. ಗಿರಿಜಾ.ಟಿ 1991, ಚಿತ್ರದುರ್ಗಜಿಲ್ಲೆ ದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ
2. ಗೌಡಪ್ಪ.ಜಿ.ಪಿ. 2014 ಚಿತ್ರದುರ್ಗ ಜಿಲ್ಲೆಯ ಜಾತ್ರೆಗಳು ಒಂದು ಸಮಾಜ ವಿಜ್ಞಾನ ಶಾಸ್ತ್ರೀಯ ಅಧ್ಯಯನ, ಮೈ.ವಿ.ವಿ.ಗೆ ಸಲ್ಲಿಸಿದ ಪಿ.ಹೆಚ್.ಡಿ. ಮಹಾ ಪ್ರಬಂಧ.
3. ನಾಗರಾಜ್.ಹೆಚ್.ಎಸ್–1988–89, ಚಿತ್ರದುರ್ಗ ಜಿಲ್ಲೆಯ ಅಂಕಿ ಅಂಶಗಳು ನೋಟ ಚಿತ್ರದುರ್ಗ.
4. ಸೂರ್ಯನಾಥ.ಯು ಕಾಮತ್–1984 ಕರ್ನಾಟಕ ರಾಜ್ಯ ಗ್ಯಾಜೆಟಿಯರ್ ಭಾಗ–01(ಸಂ).
5. ಲಕ್ಷ್ಮಣ್‌ತೆಲಗಾವಿ. ವೆಂಕಣ್ಣಚಾರ್.ಕೆ, 1977. ಐತಿಹಾಸಿಕ ಚಿತದುರ್ಗ.